## ಪರಸ್ಪರ ಮೆಚ್ಚಿದ್ದ ಅವರು ಒಂದಾಗಲಿಲ್ಲ. ಎಷ್ಟೋ ವರ್ಷಗಳ ನಂತರ ಕತೆಗಾರ ಅವರಿಬ್ಬರನ್ನೂ ಭೇಟಿಯಾದಾಗ...

**ಅವನು**

ಚಿಲಿಪಿಲಿ ಮುಂಜಾನೆ ಎದ್ದು, ಸ್ನಾನ ಮುಗಿಸಿ, ಟೀ ಮಾಡಿ ಕುಡಿದು, ಏಳು ಗಂಟೆಗೆಲ್ಲಾ ತನ್ನ ಲ್ಯಾಬೊರೆಟರಿಯಲ್ಲಿ ನುಸುಳಿ, ಆ ದಿನ ಮಾಡಬೇಕಾದ ಕೆಲಸಗಳ ಪಟ್ಟಿ ಮಾಡಿ, ಅದರಂತೆ ತನ್ನ ಕೆಲಸಗಳಲ್ಲಿ ಮಗ್ನನಾಗುವವ.

**ಅವಳು**

ಒಂಬತ್ತೂವರೆ ಸುಮಾರಿಗೆ, ಅವಸರವಸರವಾಗಿ, ತನ್ನ ತುಂಬಿದ ಬ್ಯಾಗನ್ನು ಎದೆಗೊತ್ತಿಕೊಂಡು, ಬೆವರುತ್ತಾ ಲ್ಯಾಬೊರೆಟರಿಗೆ ಬಂದು, ಬಾಸ್ ಇನ್ನೂ ಬರದಿದ್ದನ್ನು ಗಮನಿಸಿ, ಸಮಾಧಾನದ ನಿಟ್ಟುಸಿರುಬಿಟ್ಟು, ಕಂಪ್ಯೂಟರ್ ಮುಂದೆ ಕುಳಿತ ಅವನ ಬೆನ್ನಿಗೆ ಅದೇ ಬ್ಯಾಗಿನಿಂದ ಮೆಲುವಾಗಿ ಹೊಡೆದು ಅವನ ಬದಿಯಲ್ಲೇ ಕುಕ್ಕರಬಡಿಯುವವಳು.

**ಅವನು**

ಅವಳು ಆ ದಿನ ಮಾಡಬೇಕಾಗಿದ್ದ ಕೆಲಸಗಳ ಪಟ್ಟಿ ಹೇಳಿ ತಾವು ಸಂಶೋಧನೆಯ ಬಗ್ಗೆ ವಿವರಿಸುತ್ತಾ, ಸಾಗರದಂತಹ ಮುಖಹೊತ್ತ ನಿನಗೇಕೆ ಹುಡುಗಿ, ಪಿಎಚ್.ಡಿ. ಎಂದುಕೊಳ್ಳುವವ.

**ಅವಳು**

ಬಾಸ್‌ಗಿಂತಲೂ ಸರಳ ಸುಂದರವಾಗಿ ವಿವರಿಸುತ್ತಾ ಶತಶತಮಾನಗಳಿಂದ ಉಪಯೋಗಿಸುತ್ತಿದ್ದಾನೇನೋ ಎನ್ನಿಸುವಷ್ಟು ಸುಲಲಿತವಾಗಿ ಕಂಪ್ಯೂಟರ್ ಕೀ ಬೋರ್ಡಿನ ಮೇಲೆ ತನ್ನ ಅಂಕುಡೊಂಕು ಬೆರಳುಗಳನ್ನು ಓಡಿಸುವವನ ಸಣ್ಣ ತಲೆಯ ಮಿದುಳಿನಲ್ಲಿ ಎಷ್ಟೆಲ್ಲಾ ವಿಷಯಗಳಿರಬಹುದು ಎಂದು ಯೋಚಿಸುತ್ತಾ ಬೆರಗಾಗುವವಳು.

**ಅವನು**

ಕಲಿಸಿದ್ದನ್ನೆಲ್ಲಾ ಪಟಪಟನೆ ಕಲಿತು, ಇನ್ನೂ ಬೇಕೆನ್ನುವಂತೆ, ತನ್ನ ಕನ್ನಡಕದೊಳಗಿನ ಸೂರ್ಯನಂತಹ ಕಣ್ಣುಗಳಿಂದ ನೇರವಾಗಿ ನೋಡಿದಾಗ, ತಟ್ಟನೆ ಗಮನಕ್ಕೆ ಬರುವ ಅವಳ ಕಪ್ಪು ಉದ್ದನೆಯ ಜಡೆಯ ಗಾಂಭೀರ್ಯಕ್ಕೆ ಬೆರಗಾಗಿ, ಅವಳಿಗೆ ಅವಳ ಜಡೆಯ ಸೌಂದರ್ಯದ ಬಗ್ಗೆ ಅರಿವಿರಬಹುದೇ ಎಂದು ಯೋಚಿಸುವವ.

**ಅವಳು**

ಸುಡು ಸುಡು ಬಿಸಿಲಿನ ದಿನಗಳಲ್ಲೂ, ಸೋರುವ ಒದ್ದೆ ಮಳೆಯ ದಿನಗಳಲ್ಲೂ ಯಾವುದೇ ಬಯಕೆಗೂ ಒಳಗಾಗದೆ, ತನ್ನದೇ ಕೆಲಸಗಳಲ್ಲಿ ಮುಳುಗಿರುವ ಅವನನ್ನು – 'ಹಿಡಿದೆಳೆದು ಸುರುಸುರು ತಂಪು ಮಳೆಯ ಮಧ್ಯೆ ತಂದು ನಿಲ್ಲಿಸಲೇ' ಎನಿಸಿದಾಗ, ಸಣ್ಣ ಐಸ್ ತುಂಡೊಂದನ್ನು ಅವನ ಕಾಲರ್ ಹಿಂದೆ ತುರುಕಿ, ಏನೂ ಆಗದಂತೆ ಪುಸ್ತಕದಲ್ಲಿ ತಲೆ ಮರೆಸುವವಳು.

**ಅವನು**

ಡಿಪಾರ್ಟ್‌ಮೆಂಟಿನ ಉಳಿದ ಸಂಶೋಧನನಿರತ ಹುಡುಗಿಯರಂತೆ ಐದು ಗಂಟೆಗೇ 'ಫುರ್' ಎಂದು ಹಾರಿ ಹೋಗದೇ ತನ್ನದೇ ಆದ ರೀತಿಯಲ್ಲಿ ಎಕ್ಸ್‌ಪೆರಿಮೆಂಟ್‌ಗಳನ್ನು ತುಂಬ ಪ್ರೀತಿಯಿಂದ ಮಾಡುವ ನೂರೆಂಟು ಪ್ರಶ್ನೆಗಳನ್ನು ಒಂದೇ ಸಲಕ್ಕೆ ಕೇಳುವವಳು. ತಿನ್ನುವ **Fat Protein**ಗಳು